# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 379(451)

ಸದಸ್ಯರ ಹೆಸರು : ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

ಉತ್ತರಿಸುವ ದಿನಾಂಕ : 23.09.2020

| ಕ್ರ. | ಪ್ರಶ್ನೆ | ಉತ್ತರ |
| --- | --- | --- |
| ಅ | ರಾಜ್ಯದ ಅನೇಕ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಅಸಂಖ್ಯಾತ ಕಂದಾಯ ಅಪೀಲು ಪ್ರಕರಣಗಳಿದ್ದರೂ ಜಿಲ್ಲಾಧಿಕಾರಿಗಳು ನಿಗಧಿತ ಸಮಯದಲ್ಲಿ ಇತ್ಯರ್ಥಪಡಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ | ಕಂದಾಯ ನ್ಯಾಯಾಲಯಗಳ ವಿಳಂಬ ಧೋರಣೆಯಿಂದಾಗಿ ಜನ ಸಾಮಾನ್ಯರಿಗೆ ವ್ಯಾಪಕ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| ಇ | ಬಂದಿದ್ದಲ್ಲಿ, ಅದನ್ನು ನಿಭಾಯಿಸುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ಜಿಲ್ಲಾಧಿಕಾರಿ / ಉಪವಿಭಾಗಾಧಿಕಾರಿ / ತಹಶೀಲ್ದಾರ್ ನ್ಯಾಯಾಲಯಗಳಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಮತ್ತು ಇತರೆ ಕಾಯ್ದೆಯಡಿಯಲ್ಲಿ ಅರ್ಜಿಗಳು / ಮೇಲ್ಮನವಿ ಪ್ರಕರಣಗಳು ಮತ್ತು ಪುನರ್ ಪರಿಶೀಲನೆ ಅರ್ಜಿಗಳು ದಾಖಲಾಗುತ್ತಿರುತ್ತದೆ. ಕಂದಾಯ ನ್ಯಾಯಾಲಯಗಳಲ್ಲಿ ಪೀಠಾಧಿಕಾರಿಗಳಾದ ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರ್‌ರವರು ದಾಖಲಾಗಿರುವ ಅರೆ ನ್ಯಾಯಿಕ ಪ್ರಕರಣಗಳ ವಿಚಾರಣೆಯನ್ನು ನಡೆಸುತ್ತಿದ್ದು, ಪ್ರಕರಣಗಳನ್ನು ಆದ್ಯತೆ ಮೇರೆಗೆ ವಿಚಾರಣೆ ನಡೆಸಿ ಇತ್ಯರ್ಥಪಡಿಸುವಂತೆ ಪ್ರತಿ ಕಂದಾಯ ಅಧಿಕಾರಿಗಳ ಸಭೆಗಳಲ್ಲೂ ಸೂಚನೆಗಳನ್ನು ನೀಡಲಾಗುತ್ತಿದೆ. ಹಾಗೂ ಪೀಠಾಧಿಕಾರಿಗಳು ಅನ್ಯಕಾರ್ಯದಲ್ಲಿ ನಿರತರಾಗಿದ್ದ ಪಕ್ಷದಲ್ಲಿ ಅದೇ ಕಛೇರಿಯ ಅಧೀನ ಅಧಿಕಾರಿಯನ್ನು ಕೋರ್ಟ್ ಅಧಿಕಾರಿ ಎಂದು ನೇಮಕ ಮಾಡಿ, ದಾಖಲಾಗುವ ಪ್ರಕರಣಗಳನ್ನು ತ್ವರಿತಗತಿಯಲ್ಲಿ ವಿಲೇವಾರಿಗಾಗಿ ಅರೆ ನ್ಯಾಯಿಕ ಪ್ರಾಧಿಕಾರಗಳು ಕ್ರಮ ವಹಿಸಬೇಕೆಂದು ಸೂಚನೆ ನೀಡಲಾಗಿದೆ. |

---2

| | | |
|---|---|---|
| | | ಪ್ರತಿ ವಾರ ಕನಿಷ್ಟ 2 ರಿಂದ 3 ಬಾರಿ ನಿಯತಕಾಲಿಕವಾಗಿ ವಿಚಾರಣೆಗಳನ್ನು ನಿಗಧಿಪಡಿಸಿ ತ್ವರಿತಗತಿಯಲ್ಲಿ ಇತ್ಯರ್ಥ ಮಾಡಲು ತೀರ್ಪಿಗಾಗಿ ಕಾಯ್ದಿರಿಸಿದ ಪ್ರಕರಣಗಳಲ್ಲಿ ಯಾವುದೇ ವಿಳಂಬವಿಲ್ಲದೆ ಆದೇಶಗಳನ್ನು ಘೋಷಣೆ ಮಾಡುವುದಕ್ಕೆ ಕ್ರಮ ಕೈಗೊಳ್ಳಲು ಸೂಚನೆಗಳನ್ನು ನೀಡಲಾಗಿರುತ್ತದೆ. ಅರೆ ನ್ಯಾಯಿಕ ಪ್ರಕರಣಗಳನ್ನು ತೀವ್ರಗತಿಯಲ್ಲಿ ವಿಲೇವಾರಿ ಮಾಡುವ ದೃಷ್ಟಿಯಿಂದ Revenue Court Case Monitoring System (RCCMS) ತಂತ್ರಾಂಶವನ್ನು NIC ಕರ್ನಾಟಕ ಘಟಕ, ಬೆಂಗಳೂರು ರವರು ಅಭಿವೃದ್ಧಿಪಡಿಸಿದ್ದು, ಸದರಿ ತಂತ್ರಾಂಶವನ್ನು ರಾಜ್ಯದ ಎಲ್ಲಾ ಜಿಲ್ಲೆಯಲ್ಲಿರುವ ಕಂದಾಯ ಇಲಾಖೆಯ ಕಛೇರಿಯಲ್ಲಿ ಅನುಷ್ಠಾನಗೊಳಿಸಲು ಪ್ರಿಸೈಡಿಂಗ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಪರಿಶೀಲನಾ ಸಮಿತಿ ರಚಿಸಿ ಸರ್ಕಾರವು ಆದೇಶ ಸಂಖ್ಯೆ:ಕಂಇ 152 ಎಲ್‌ಜಿಜಡ್ 2016, ದಿನಾಂಕ:04.03.2017ರನ್ವಯ ಆದೇಶ ಹೊರಡಿಸಲಾಗಿರುತ್ತದೆ. (ಪ್ರತಿ ಅನುಬಂಧದಲ್ಲಿ ಲಗತ್ತಿಸಿದೆ). ಸದರಿ ತಂತ್ರಾಂಶದಲ್ಲಿ ಕಂದಾಯ ಅಧಿಕಾರಿಗಳಲ್ಲಿ ದಾಖಲಾಗಿರುವ ಅರೆ ನ್ಯಾಯಿಕ ಪ್ರಕರಣಗಳು ನಿರ್ವಹಣೆಯಾಗುತ್ತಿದ್ದು, ಸಾರ್ವಜನಿಕರು ವಿಚಾರಣಾ ದಿನಾಂಕ, ಪ್ರಕರಣ ಹಂತದ ಮಾಹಿತಿ ಮತ್ತು ಆದೇಶದ ಪ್ರತಿಗಳನ್ನು ಆನ್‌ಲೈನ್ ಮೂಲಕವೇ ಪಡೆಯಲು ಅವಕಾಶ ಕಲ್ಪಿಸಲಾಗಿದೆ. |

ಸಂಖ್ಯೆ:ಆರ್‌ಡಿ/85/ಟಿಆರ್‌ಎಂ/2020

**(ಆರ್. ಅಶೋಕ)**
ಕಂದಾಯ ಸಚಿವರು
ಕರ್ನಾಟಕ ಸರ್ಕಾರ

ಅನುಬಂಧ (1)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: Revenue Court Cases Monitoring System (RCCMS) ತಂತ್ರಾಂಶವನ್ನು ಪರಿಣಾಮಕಾರಿಯಾಗಿ ಜಿಲ್ಲಾ / ಉಪವಿಭಾಗ / ತಾಲ್ಲೂಕು ಮಟ್ಟದಲ್ಲಿ ಅನುಷ್ಠಾನಗೊಳಿಸಲು ಸಮಿತಿಗಳನ್ನು ರಚಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 21 ಎಲ್‌ಜಿಪಿ 2016 ದಿನಾಂಕ: 20.08.2016
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಇವರ ಪತ್ರ ಸಂಖ್ಯೆ: ಕಂಇ 19 ನ್ಯಾಪ್ರಸ. 2016 ದಿನಾಂಕ: 19-12-2016.
2. ಹೆಚ್ಚುವರಿ ಅಡ್ವೋಕೇಟ್ ಜನರಲ್, ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇವರ ಪತ್ರ ದಿನಾಂಕ: 13-02-2017.

****

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ: 20.08.2016ರ ಸುತ್ತೋಲೆಯಲ್ಲಿ ಜಿಲ್ಲಾಧಿಕಾರಿ/ ಉಪವಿಭಾಗಾಧಿಕಾರಿ/ತಹಶೀಲ್ದಾರ್ ನ್ಯಾಯಾಲಯಗಳಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ಮತ್ತು ಇತರೆ ಕಾಯ್ದೆಯಡಿಯಲ್ಲಿ ಅರ್ಜಿಗಳು/ಮೇಲ್ಮನವಿ ಪ್ರಕರಣಗಳು ದಾಖಲಾಗಿದ್ದು, ಈ ಪ್ರಕರಣಗಳು ಅರೆನ್ಯಾಯಿಕ ಪ್ರಕರಣಗಳಾಗಿರುತ್ತವೆ. ಸಂಬಂಧಪಟ್ಟ ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವಶ್ಯಕ ಇನ್ನಿತರೆ ಸಂಬಂಧಿಸಿದ ಪ್ರಾಧಿಕಾರಿಗಳಿಗೆ ನಿಯಮಾನುಸಾರ ನೋಟೀಸ್‌ಗಳನ್ನು ಶಾಸನಬದ್ಧ ಪ್ರಾಧಿಕಾರಗಳು ಜಾರಿ ಮಾಡಿ ಹೇಳಿಕೆ ದಾಖಲಾತಿಗಳನ್ನು ಪಡೆದು ಅಹವಾಲುಗಳನ್ನು ಆಲಿಸುವ ಮೂಲಕ ವಿಚಾರಣೆಯನ್ನು ನಡೆಸಿ ಕಾನೂನಿನನ್ವಯ ಅರೆ ನ್ಯಾಯಿಕ ಅಧಿಕಾರವನ್ನು ಚಲಾಯಿಸಿ ತೀರ್ಪು/ಆದೇಶಗಳನ್ನು ಹೊರಡಿಸುವ ಪ್ರಾಧಿಕಾರಗಳಾಗಿದ್ದು, ಈ ಪ್ರಾಧಿಕಾರಗಳು ಶಾಸನಬದ್ಧ ಅಧಿಕಾರವನ್ನು ಚಲಾಯಿಸಿ ನಿಯಮಾನುಸಾರ ಪ್ರಕರಣಗಳನ್ನು ಶೀಘ್ರ ಇತ್ಯರ್ಥಪಡಿಸುವಲ್ಲಿ ಕಂದಾಯ ಅಧಿಕಾರಿಗಳು ವಿಶೇಷ ಆಸಕ್ತಿ ವಹಿಸದೇ ಅನೇಕ ಪ್ರಕರಣಗಳಲ್ಲಿ ವಿಚಾರಣೆಗಳನ್ನು ನಡೆಸಲು ದಿನಾಂಕವನ್ನು ನಿಗಧಿಪಡಿಸುವಲ್ಲಿ ತೀವ್ರ ವಿಳಂಬ ಮಾಡುವುದು, ವಿಚಾರಣೆ ನಡೆಸಿದಲ್ಲಿ ಮುಂದಿನ ವಿಚಾರಣೆ ದಿನಾಂಕವನ್ನು ಗೊತ್ತುಪಡಿಸುವಾಗ ಅನವಶ್ಯಕವಾಗಿ ಧೀರ್ಘ ಕಾಲದ ದಿನಾಂಕ ನೀಡುವುದು, ಇನ್ನು ಕೆಲವು ಪ್ರಕರಣಗಳನ್ನು ವಿಚಾರಣೆಯನ್ನು ಮುಕ್ತಾಯಗೊಳಿಸಿ, ತೀರ್ಪಿಗಾಗಿ ಕಾಯ್ದಿರಿಸಿದೆ ಎಂದು ಆದೇಶಿಸಿ ಒಂದು ವರ್ಷಕ್ಕೂ ಮೇಲ್ಪಟ್ಟು ತೀರ್ಪುಗಳನ್ನು ನೀಡದೇ ಇರುವ ಪ್ರಕರಣಗಳನ್ನೂ ಸಹ ಸರ್ಕಾರವು ಗಮನಿಸಿದೆ.

ಈ ದಿಸೆಯಲ್ಲಿ ಸರ್ಕಾರವು ತ್ವರಿತಗತಿಯಲ್ಲಿ ವಿಲೇವಾರಿಗಾಗಿ ಅರೆ ನ್ಯಾಯಿಕ ಪ್ರಾಧಿಕಾರಗಳು ಕ್ರಮವಹಿಸಬೇಕೆಂದು ಸೂಚನೆ ನೀಡಿದ್ದು, ಪ್ರತಿವಾರ ಕನಿಷ್ಠ 2 ರಿಂದ 3 ಬಾರಿ ನಿಯತಕಾಲಿಕವಾಗಿ ವಿಚಾರಣೆಗಳನ್ನು ನಿಗಧಿಪಡಿಸಿ ತ್ವರಿತ ಗತಿಯಲ್ಲಿ ಇತ್ಯರ್ಥ ಮಾಡಲು ತೀರ್ಪಿಗಾಗಿ ಕಾಯ್ದಿರಿಸಿದ ಪ್ರಕರಣಗಳಲ್ಲಿ ಯಾವುದೇ ವಿಳಂಬವಿಲ್ಲದೆ ಆದೇಶಗಳನ್ನು ಘೋಷಣೆ ಮಾಡುವುದಕ್ಕೆ ಕ್ರಮಕೈಗೊಳ್ಳಲು ಸೂಚನೆಗಳನ್ನು ನೀಡಲಾಗಿದೆ.

..2

ಕಂದಾಯ ಇಲಾಖೆಯಲ್ಲಿನ ಜಿಲ್ಲಾಧಿಕಾರಿಗಳ/ಉಪವಿಭಾಗಾಧಿಕಾರಿಗಳ/ತಹಶೀಲ್ದಾರ್‌ಗಳ ಅರೆನ್ಯಾಯಿಕ ಪ್ರಕರಣಗಳನ್ನು ತೀವ್ರ ಗತಿಯಲ್ಲಿ ವಿಲೇವಾರಿ ಮಾಡುವ ದೃಷ್ಟಿಯಿಂದ ಮೇಲೆ (2)ರಲ್ಲಿ ಓದಲಾದ ದಿನಾಂಕ: 19-12-2016ರ ಪತ್ರದಲ್ಲಿ Revenue Court Cases Monitoring System (RCCMS) ತಂತ್ರಾಂಶವನ್ನು ಎನ್.ಐ.ಸಿ. ಕರ್ನಾಟಕ ಘಟಕ, ಬೆಂಗಳೂರು ರವರು ಅಭಿವೃದ್ಧಿಪಡಿಸಿದ್ದು, ಈ ತಂತ್ರಾಂಶವನ್ನು ಬೀದರ್ ಜಿಲ್ಲೆಯಲ್ಲಿ ಪೂರ್ಣ ಪ್ರಮಾಣದಲ್ಲಿ ಹಾಗೂ ಕೆಲವು ಜಿಲ್ಲೆಗಳಲ್ಲಿ ಭಾಗಶಃ ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿರುತ್ತದೆ. ಈ ತಂತ್ರಾಂಶವು ಬೀದರ್ ಜಿಲ್ಲೆಯಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಂಡಿರುವುದರಿಂದ, ಸದರಿ ತಂತ್ರಾಂಶವನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿರುವ ಕಂದಾಯ ಇಲಾಖೆಯ ಕಛೇರಿಗಳಲ್ಲಿ ಅನುಷ್ಠಾನಗೊಳಿಸಲು ನಿರ್ಧರಿಸಿ ಕಂದಾಯ ಇಲಾಖೆಯ ಎಲ್ಲಾ ಹಂತದ ಕಛೇರಿಗಳಲ್ಲಿ Revenue Court Cases Monitoring System (RCCMS) ತಂತ್ರಾಂಶವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಪ್ರಿಸ್ಯೈಡಿಂಗ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಪರಿಶೀಲನಾ ಸಮಿತಿ (Monitoring Committee) ಗಳನ್ನು ಜಿಲ್ಲಾ/ಉಪವಿಭಾಗ/ತಾಲ್ಲೂಕು ಮಟ್ಟದಲ್ಲಿ ರಚಿಸಲು ಸರ್ಕಾರವು ನಿರ್ಧರಿಸಿದೆ. ಆದುದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕಂಇ 152 ಎಲ್‌ಜಿಜಡ್ 2016,**
**ಬೆಂಗಳೂರು ದಿನಾಂಕ: 04-03-2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕಂದಾಯ ಇಲಾಖೆಯ ಜಿಲ್ಲಾ / ಉಪ ವಿಭಾಗ / ತಾಲ್ಲೂಕು ಮಟ್ಟದಲ್ಲಿ Revenue Court Cases Monitoring System (RCCMS) ತಂತ್ರಾಂಶವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಈ ಕೆಳಕಂಡಂತೆ ಸಮಿತಿಯನ್ನು ಈ ಕೆಳಕಂಡಂತೆ ರಚಿಸಿ ಆದೇಶಿಸಿದೆ.

I. **ಜಿಲ್ಲಾಮಟ್ಟದ ಪರಿಶೀಲನಾ ಸಮಿತಿ (District Level Monitoring Committee):**

| | | |
|---|---|---|
| 1. | ಅಪರ ಜಿಲ್ಲಾಧಿಕಾರಿ | ಅಧ್ಯಕ್ಷರು |
| 2. | ವ್ಯವಸ್ಥಾಪಕರು/ಶಿರಸ್ತೇದಾರರು<br>(ನ್ಯಾಯಾಲಯ ಪ್ರಕರಣಗಳನ್ನು ನಿರ್ವಹಿಸುವ) | ಸದಸ್ಯ ಕಾರ್ಯದರ್ಶಿ |
| 3. | ವಿಷಯ ನಿರ್ವಾಹಕರು<br>(ನ್ಯಾಯಾಲಯ ಪ್ರಕರಣಗಳನ್ನು ನಿರ್ವಹಿಸುವ) | ಸದಸ್ಯರು |
| 4. | DIO, NIC | ತಾಂತ್ರಿಕ ಸದಸ್ಯರು |
| 5. | ADIO, NIC | ತಾಂತ್ರಿಕ ಸದಸ್ಯರು |
| 6. | ಜಿಲ್ಲಾ ವ್ಯವಸ್ಥಾಪಕರು, ಇ-ಆಡಳಿತ | ತಾಂತ್ರಿಕ ಸದಸ್ಯರು |

II. ಉಪವಿಭಾಗ ಮಟ್ಟದ ಪರಿಶೀಲನಾ ಸಮಿತಿ (Sub-Division Level Monitoring Committee):

| | | |
|---|---|---|
| 1. | ಉಪ ವಿಭಾಗಾಧಿಕಾರಿ | ಅಧ್ಯಕ್ಷರು |
| 2. | ತಹಶೀಲ್ದಾರ್ ಗ್ರೇಡ್-2, ಉಪವಿಭಾಗಾಧಿಕಾರಿಗಳ ಕಛೇರಿ. | ಸದಸ್ಯ ಕಾರ್ಯದರ್ಶಿ |
| 3. | ವಿಷಯ ನಿರ್ವಾಹಕರು (ನ್ಯಾಯಾಲಯ ಪ್ರಕರಣಗಳನ್ನು ನಿರ್ವಹಿಸುವ) | ಸದಸ್ಯರು |
| 4. | ಭೂಮಿ ಕೋ-ಆರ್ಡಿನೇಟರ್ | ತಾಂತ್ರಿಕ ಸದಸ್ಯರು |
| 5. | ಸಕಾಲ ಸಮಾಲೋಚಕರು | ತಾಂತ್ರಿಕ. ಸದಸ್ಯರು |

III. ತಾಲ್ಲೂಕು ಮಟ್ಟದ ಪರಿಶೀಲನಾ ಸಮಿತಿ (Taluk Level Monitoring Committee):

| | | |
|---|---|---|
| 1. | ತಹಶಿಲ್ದಾರ್ | ಅಧ್ಯಕ್ಷರು |
| 2. | ವ್ಯವಸ್ಥಾಪಕರು/ಶಿರಸ್ತೇದಾರರು (ನ್ಯಾಯಾಲಯ ಪ್ರಕರಣಗಳನ್ನು ನಿರ್ವಹಿಸುವ) | ಸದಸ್ಯ ಕಾರ್ಯದರ್ಶಿ |
| 3. | ವಿಷಯ ನಿರ್ವಾಹಕರು (ನ್ಯಾಯಾಲಯ ಪ್ರಕರಣಗಳನ್ನು ನಿರ್ವಹಿಸುವ) | ಸದಸ್ಯರು |
| 4. | ಭೂಮಿ ಕೋ-ಆರ್ಡಿನೇಟರ್ | ತಾಂತ್ರಿಕ ಸದಸ್ಯರು |
| 5. | ಸಕಾಲ ಸಮಾಲೋಚಕರು | ತಾಂತ್ರಿಕ ಸದಸ್ಯರು |

ಮೇಲ್ಕಂಡ ಪರಿಶೀಲನಾ ಸಮಿತಿಗಳು ಪ್ರತಿ ಶನಿವಾರ ಸಭೆಯನ್ನು ನಡೆಸಿ Revenue Court Cases Monitoring System (RCCMS) ತಂತ್ರಾಂಶದ ಅನುಷ್ಠಾನದ ಪ್ರಗತಿಯನ್ನು ಪರಿಶೀಲಿಸುವುದು. ಹಾಗೂ ಯಾವುದೇ ಸಮಸ್ಯೆಗಳಿದ್ದಲ್ಲಿ ಸಂಬಂಧಿಸಿದ DIO, NIC ರವರನ್ನು ಸಂಪರ್ಕಿಸಿ ಪರಿಹರಿಸಿಕೊಳ್ಳತಕ್ಕದ್ದು.

ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳು Revenue Court Cases Monitoring System (RCCMS) ತಂತ್ರಾಂಶವನ್ನು ಸಮರ್ಪಕವಾಗಿ ತಮ್ಮ ಜಿಲ್ಲೆಯ ಎಲ್ಲಾ ಹಂತಗಳಲ್ಲಿ ಅನುಷ್ಠಾನಗೊಳಿಸುತ್ತಿರುವ ಬಗ್ಗೆ ಪ್ರತಿ ಮಾಹೆಯ ಕಂದಾಯ ಅಧಿಕಾರಿಗಳ ಸಭೆಯಲ್ಲಿ ಪರಾಮರ್ಶಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

o/c

06/03/2017

(ಟಿ.ಸಿ.ಕಾಂತರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ(ಸಮನ್ವಯ & ಭೂ ಮಂಜೂರಾತಿ-3)

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು (ರಾಜ್ಯ ಪತ್ರದ ಮುಂದಿನ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 100 ಪ್ರತಿಯನ್ನು ಕಂದಾಯ ಇಲಾಖೆಗೆ ಕಳುಹಿಸಲು ಕೋರಲಾಗಿದೆ.)

ಇವರಿಗೆ:

1. ಎಲ್ಲಾ ಪ್ರಾದೇಶಿಕ ಆಯುಕ್ತರು.
2. ಎಲ್ಲಾ ಜಿಲ್ಲಾಧಿಕಾರಿಗಳು.

3. ಸ್ಟೇಟ್ ಇನ್‌ಫಾರ್ಮ್ಯಾಟಿಕ್ಸ್ ಅಧಿಕಾರಿ, ಎನ್.ಐ.ಸಿ., ಕರ್ನಾಟಕ ಘಟಕ, ಬೆಂಗಳೂರು.
4. ಎಲ್ಲಾ ಉಪ ವಿಭಾಗಾಧಿಕಾರಿಗಳಿಗೆ (ಜಿಲ್ಲಾಧಿಕಾರಿಗಳ ಮೂಲಕ)
5. ಎಲ್ಲಾ ತಹಶೀಲ್ದಾರ್‌ಗಳಿಗೆ (ಜಿಲ್ಲಾಧಿಕಾರಿಗಳ ಮೂಲಕ)
6. ಕಛೇರಿ ಪ್ರತಿ.

ಪ್ರತಿಯನ್ನು ಮಾಹಿತಿಗಾಗಿ :

1. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಯವರು, ಕರ್ನಾಟಕ ಸರ್ಕಾರ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ(ವಿಪತ್ತು ನಿರ್ವಹಣೆ), ಬಹುಮಹಡಿಕಟ್ಟಡ, ಬೆಂಗಳೂರು.

.......